

> **ನಾಟಕದ ಸಂಬಂಧವಾದರೂ ಸರಿ, ಮದುವೆ ಎನ್ನುವುದು ತೋರಿಕೆಗಾದರೂ, ಮೇಲ್ನೋಟಕ್ಕಾದರೂ ಸರಿ ಇರುವಂತೆ ತೋರಬೇಕು ಎನ್ನುವುದು ಕಾನೂನು ರೂಪಿಸುವವರ ಪ್ರಜ್ಞೆಯಲ್ಲೂ ಬೇರೂರಿರುವಂತಿದೆ.**



ಗಂಡಹೆಂಡತಿಯರಿಗೆ ಕಾನೂನು ಅನುವು ಮಾಡಿಕೊಡಬೇಕು' ಎಂಬುವುದು ಅವರ ವಾದ. ಆದರೆ, ಹೀಗೆ ಮಾಡುವುದರಿಂದ, 'ಮಹಿಳೆಗೆ ಯಾವುದೇ ಹಿಂಸೆಯಾದರೂ ಅದನ್ನು ಮರೆತು, ಹೊಂದಿಕೊಂಡು ಸಂಸಾರ ನಡೆಸಬೇಕು' ಎಂದು ಸಮಾಜದಲ್ಲಿ ಈಗಾಗಲೇ ಬೇರೂರಿರುವ ಕಲ್ಪನೆಯನ್ನು ಇದು ಇನ್ನೂ ಪುಷ್ಟೀಕರಿಸಿದಂತಾಗುತ್ತದೆ. 'ಇದು ರಾಜಿಮಾಡಿಕೊಳ್ಳಬಹುದಾದ ಅಪರಾಧ' ಎಂದು ಕಾನೂನೇ ಹೇಳಿದರೆ, ಆಗ ಹೆಣ್ಣುಮಕ್ಕಳ ಮೇಲೂ ಅದು ಇನ್ನೂ ದೊಡ್ಡ ಒತ್ತಡವಾದಂತಾಗುತ್ತದೆ.

ಕೌಟುಂಬಿಕ ದೌರ್ಜನ್ಯದಿಂದ ಮಹಿಳೆಯರನ್ನು ರಕ್ಷಿಸುವ ಕಾಯ್ದೆ, 2005ರಲ್ಲಿ ಜಾರಿಗೆ ಬಂದು, ಕುಟುಂಬದ ಒಳಗೆ ಮಹಿಳೆಯರ ಮೇಲಾಗಬಹುದಾದ ಹಲವು ರೀತಿಯ ಹಿಂಸಾಚಾರಗಳ ಬಗ್ಗೆ ಮೊದಲ ಬಾರಿಗೆ ಒಂದು ಕಾಯ್ದೆ ಮಾತನಾಡಿತು. ಈ ಕಾಯ್ದೆಯ ಪ್ರಕಾರ ಮೌಖಿಕ, ಮಾನಸಿಕ ಹಿಂಸೆಗಳೂ, ಹಣದ ವಿಷಯದಲ್ಲಿ ನಡೆಯುವ ಹಿಂಸೆಗಳೂ, ಮನೆಯೊಳಗೆ ನಡೆದರೆ ಅದು ಕೌಟುಂಬಿಕ ಹಿಂಸೆ, ಹಾಗೂ ಗಂಡನೋ ಅಥವಾ ಕುಟುಂಬದ ಇನ್ಯಾರೋ ಲೈಂಗಿಕ ಹಿಂಸೆ ನಡೆಸಿದರೆ, ಅದು ಸಹ ಕೌಟುಂಬಿಕ ಹಿಂಸೆ ಎಂಬುದಾಗಿ ಕಾನೂನು ಜಾರಿಯಾಯಿತು. ಆದರೆ, ಈ ಕಾಯ್ದೆ, ಬೇರೆ ಯಾವ ರೀತಿಯಲ್ಲೂ ಮಹಿಳೆಯರ ಮೇಲಾಗುತ್ತಿರುವ ಕೌಟುಂಬಿಕ ದೌರ್ಜನ್ಯವನ್ನು ನಿಗ್ರಹಿಸುವಲ್ಲಿ ಕೆಲಸಮಾಡಲಿಲ್ಲ. ಏಕೆಂದರೆ, ಅದನ್ನು ಕಾರ್ಯರೂಪಕ್ಕೆ ತರುವಲ್ಲಿ ಕೆಲಸಮಾಡಬೇಕಾಗಿರುವ ಪೊಲೀಸರು, ನ್ಯಾಯಾಲಯಗಳು, ಅಧಿಕಾರಿಗಳು ಎಲ್ಲರೂ ಸಮಾಜದಲ್ಲಿ ಉಳಿದವರು ನಂಬುವಂತೆ, 'ಹೇಗಾದರಾಗಲೀ, ಯಾವ ಹಿಂಸೆಯೇ ಇರಲಿ, ಸಂಸಾರವೆಂಬುದನ್ನು ಉಳಿಸುವುದೇ ಪ್ರತಿಯೊಬ್ಬರ ಮೊದಲ ಆದ್ಯತೆಯಾಗಿರಬೇಕು' ಎಂಬುದನ್ನು ನಂಬಿ ನಡೆಯುತ್ತಿರುತ್ತಾರೆ. ಹಿಂಸೆ ನೀಡುವವರಿಗೆ ತಿದ್ದಿಕೊಳ್ಳುವಂತೆ ಒಂದೆರಡು ಬುದ್ಧಿಮಾತು ಹೇಳಿ, ಹೆಂಗಸರಿಗೆ ಹೊಂದಿಕೊಂಡು ನಡೆಯುವಂತೆ ತಿಳಿಹೇಳಿ, ಮನೆಗಳಿಗೆ ವಾಪಸ್ಸು ಕಳಿಸುತ್ತಾರೆ. ಹಿಂಸೆ ನೀಡುವ ಆ ಗಂಡಸರು ಬದಲಾಗುವುದಿಲ್ಲ, ಏಕೆಂದರೆ ಇದು ಬುದ್ಧಿಮಾತಿನಿಂದ ಬದಲಾಗುವ ಮನಸ್ಥಿತಿಯಲ್ಲ. ಎಷ್ಟೋ ವರ್ಷಗಳಿಂದ ನಮ್ಮ ಸ್ಮೃತಿ, ಪ್ರಜ್ಞೆ, ಯೋಚನಾಕ್ರಮಗಳಲ್ಲಿ ಬೇರೂರಿರುವ ತಪ್ಪಾದ ಅಧಿಕಾರ, ಅರ್ಹತೆಯ ಕಲ್ಪನೆಗಳು, ಹಾಗೆಲ್ಲಾ ಬುದ್ಧಿ ಮಾತಿನಿಂದ ಬದಲಾಗುವುದಿಲ್ಲ.

ಅಷ್ಟೇ ಅಲ್ಲದೇ, ಒಂದಿಷ್ಟೂ ಪ್ರೀತಿ, ಗೌರವವಿಲ್ಲದಿರುವವರೇ ಆ ರೀತಿಯ ಹಿಂಸೆ ನೀಡಲು ಸಾಧ್ಯ. ಅಂತಹ ನಡತೆಯನ್ನು ಮರೆತು, ಕ್ಷಮಿಸಿ ನಡೆಯುವುದೂ ಮನುಷ್ಯರಾದವರಿಗೆ ಸಾಧ್ಯವಿರುವುದಿಲ್ಲ. ಮನೆಯವರ, ಸಮಾಜದ ಒತ್ತಡಕ್ಕೆ ಸಿಕ್ಕಿ, ಹೊಂದಿಕೊಂಡ, ಕ್ಷಮಿಸಿದ ನಾಟಕಮಾಡಿ ದಿನ ತಳ್ಳುತ್ತಿರಬೇಕಷ್ಟೇ. ಆದರೆ, ನಾಟಕದ ಸಂಬಂಧವಾದರೂ ಸರಿ, ಮದುವೆ ಎನ್ನುವುದು ತೋರಿಕೆಗಾದರೂ, ಮೇಲ್ನೋಟಕ್ಕಾದರೂ ಸರಿ ಇರುವಂತೆ ತೋರಬೇಕು ಎನ್ನುವುದು ಕಾನೂನು ರೂಪಿಸುವವರ ಪ್ರಜ್ಞೆಯಲ್ಲೂ ಬೇರೂರಿರುವಂತಿದೆ.

## ಸಾಮಾಜಿಕ ಮನಸ್ಥಿತಿ

ಪಟ್ಟಣಗಳಲ್ಲಿ ವಾಸವಿರುವ ಬಡವರ ಕೇರಿಯಲ್ಲಿ ನಡೆದ ಒಂದು ಕಾರ್ಯಕ್ರಮದಲ್ಲಿ, ಮನೆಯೊಳಗೆಯೇ ನಡೆಯುವ ಇಂತಹ ಕ್ರೌರ್ಯಗಳ ಬಗ್ಗೆ ನಾನು ಮಾತನಾಡಬೇಕಿತ್ತು. 'ಗಂಡಂದಿರು ಯಾಕೆ ಹೊಡೆಯುತ್ತಾರೆ?' ಎಂಬ ಪ್ರಶ್ನೆಯನ್ನು ಅಲ್ಲಿ ಸೇರಿದ್ದ ಮಹಿಳೆಯರನ್ನು ಉದ್ದೇಶಿಸಿ ಕೇಳಿದೆ. ಅಲ್ಲಿ ನನಗೆ ಸಿಕ್ಕಿದ ಉತ್ತರಗಳು ನನ್ನನ್ನು ಅಲ್ಲಾಡಿಸಿಬಿಟ್ಟವು.